**ಓ ಎಸ್ ನಂ 117/2018**

**ಪಿ. ಡಬ್ಲ್ಯೂ ಃ 3**

**ದಿಃ 13.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎಸ್ ಸಿ ಆರ್ ವಕೀಲರಿಂದ ಃ**

ಕಲ್ಕೆರೆಗೆ ಮತ್ತು ದೊಡ್ಡ ಮುದಿಗೆರೆಗೆ 2 ಕಿ.ಮೀ. ದೂರವಾಗುತ್ತದೆ. ನಾನು ವಾಸವಿರುವ ಊರು ದೊಡ್ಡಮುದಿಗೆರೆ ದಾಖ್ಲೆಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾನು ಕಲ್ಲೆರೆ ಗ್ರಾಮದಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ.  ಆ ಊರಿನಲ್ಲಿ ವಾಸವಿರುವ ಬಗ್ಗೆ ನನ್ನ ಹೆಸರಿನಲ್ಲಿ ರೇಷನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಇವೆ ಅವುಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು ಚಿಕ್ಕರಂಗನ ಆಸ್ತಿಯ ಬಗ್ಗೆ ಸಾಕ್ಷಿ ಹೇಳಲು ಬಂದಿದ್ದೇನೆ. ನನ್ನನ್ನು ರಂಗಸ್ವಾಮಯ್ಯ ಸಾಕ್ಷಿ ಹೇಳಬೇಕೆಂದು ಕರೆದುಕೊಂಡು ಬಂದಿದ್ದಾರೆ.  ರಂಗಸ್ವಾಮಯ್ಯ ಇವರು ಹೇಳಿಕೊಟ್ಟಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣಪತ್ರದಲ್ಲಿ ದಾವಾ ಸ್ವತ್ತುಗಳು ನನಗೆ ಗೊತ್ತು ಎಂದು ಬರೆಯಿಸಿದ್ದೇನೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ.  ದಾವೆಯನ್ನು ಯಾರು, ಯಾರ ಮೇಲೆ ಹಾಕಿದ್ದಾರೆ ಎಂದು ಗೊತ್ತಿಲ್ಲ. ಏನು ಪರಿಹಾರ ಕೇಳಿ ಕೇಸ್ ಹಾಕಿದ್ದಾರೆ ಎಂದು ಗೊತ್ತಿಲ್ಲ. ದಾವಾ ಹಾಕುವ ಕಾಲಕ್ಕೆ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವೆ ಹಾಕುವ ಕಾಲಕ್ಕೆ ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು  ಆಗಿರಲಿಲ್ಲ ಎಂದರೆ ಸರಿ.  ಅವರು ಎಷ್ಟು ಸ್ವತ್ತುಗಳಿಗಾಗಿ ದಾವೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಅವುಗಳ ಸ.ನಂ. , ವಿಸ್ತೀರ್ಣ ಮತ್ತು ಚೆಕ್ ಬಂದಿ ಗೊತ್ತಿಲ್ಲ.

ಚಿಕ್ಕರಂಗಯ್ಯ ಇವರಿಗೆ 5 ಜನ ಮಕ್ಕಳಿರುತ್ತಾರೆ. ಚಿಕ್ಕರಂಗಯ್ಯನ ಮಕ್ಕಳು ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ರಂಗಯ್ಯ ಎನ್ನುವವರು ಊರಿನಲ್ಲಿದ್ದರು, ಉಳಿದವರು ಬೇರೆ ಬೇರೆ ಊರಿನಲ್ಲಿ ವಾಸವಾಗಿದ್ದರು ಎಂದು ಸಾಕ್ಷಿ ಹೇಳುತ್ತಾರೆ.  ರಂಗಯ್ಯ ನ ಮಕ್ಕಳಿಗೆ ರಂಗಯ್ಯನೇ ಮದುವೆ ಮಾಡಿದ್ದಾರೆ ಎಂದರೆ ಸರಿ. ಚಿಕ್ಕಣ್ಣ ನಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ಅವರ ಮಕ್ಕಳ ಮದುವೆಯನ್ನು ಚಿಕ್ಕಣ್ಣ ಮಾಡಿದ್ದಾರೆ ಎಂದರೆ ಸರಿ.  ಚಿಕ್ಕಣ್ಣನ ತಮ್ಮ ರಾಜಣ್ಣ ಎಂದರೆ ಸರಿ. ಅವರಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ರಾಜು ಇವರ ಮಕ್ಕಳ ಮದುವೆಯನ್ನು ಅವರೇ ಮಾಡಿದ್ದಾರೆ ಎಂದರೆ

ನನಗೆ ಗೊತ್ತಿಲ್ಲ. ಮರಿಯಪ್ಪ ಅಲಿಯಾಸ್ ಮಾಗಡಯ್ಯ ಇವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಮಕ್ಕಳ ಮದುವೆಯನ್ನು ಮರಿಯಪ್ಪ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕರಾಜು ಇವರಿಗೆ ಎಷ್ಟು ಜನ ಮಕ್ಕಳೆಂದು ಗೊತ್ತಿಲ್ಲ ಮತ್ತು ಅವರು ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರ ಮಕ್ಕಳಿಗೆ ಮದುವೆ ಮಾಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ವಾದಿಯ ತಂಗಿ ಹೆಸರು ನನಗೆ ಗೊತ್ತಿಲ್ಲ. ಅವರು ಎಲ್ಲಿ ವಾಸವಾಗಿದ್ದಾರೆ ಎಂದು ಗೊತ್ತಿಲ್ಲ. ಅವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಪ್ರಮಾಣಪತ್ರ ಬರೆಯಿಸಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಅದನ್ನು ಯಾವ ನೋಟರಿ ಅಥವಾ ಓತ್ ಕಮೀಷನರ್ ಬಳಿ ಮಾಡಿಸಿದ್ದಾರೆ ಎಂದು ಗೊತ್ತಿಲ್ಲ. ಪ್ರಮಾಣಪತ್ರದಲ್ಲಿ ನಾನೇ ಸಹಿ ಮಾಡಿರುತ್ತೇನೆ. ಚಿಕ್ಕರಂಗಯ್ಯ ಇವರ ಕುಟುಂಬದಲ್ಲಿ ಏನು ವ್ಯವಹಾರಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಅವರು ಆಸ್ತಿಯಲ್ಲಿ ಭಾಗ ತೆಗೆದುಕೊಂಡು ಭದ್ರಾವತಿಯಲ್ಲಿ ಹೋಗಿ ನೆಲೆಸಿದ್ದರು ಎಂದರೆ ಸರಿಯಲ್ಲ. ಅವರು ಪೇಪರ್ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂಬ ವಿಷಯ ಗೊತ್ತು. ಚಿಕ್ಕಣ್ಣ ಮತ್ತು ರಾಜು ಇವರು ಪೇಪರ್ ಮಿಲ್ ನಲ್ಲಿ ಕೆಲಸ ಮಾಡಿ ಆಸ್ತಿ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಮತ್ತು ರಂಗಸ್ವಾಮಯ್ಯ ಚೆನ್ನಾಗಿ ಪರಿಚಯವಿರುತ್ತೇವೆ ಎಂದರೆ ಸರಿ. ಅವರ ಮಾತು ಕೇಳಿಕೊಂಡು ನನಗೆ ಯಾವುದೆ ವಿಷಯಗಳು ಗೊತ್ತಿಲ್ಲದೆ ಇದ್ದರೂ ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**

**ಓ ಎಸ್ ನಂ 117/2018**

**ಪಿ. ಡಬ್ಲ್ಯೂ ಃ 4**

**ದಿಃ 13.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎಸ್ ಸಿ ಆರ್ ವಕೀಲರಿಂದ ಃ**

ನಮ್ಮ ಊರು ಕಲ್ಕೆರೆ ಇರುತ್ತದೆ. ನಾನು 6 ರಿಂದ 7 ನೆ ತರಗತಿಯವರಗೆ ಓದಿದ್ದೇನೆ. ನನಗೆ 39 ವರ್ಷ ವಯಸ್ಸಿದೆ. ನಾನು 1984 ರಲ್ಲಿ ಹುಟ್ಟಿರಬಹುದು. ನನ್ನನ್ನು ಸಾಕ್ಷಿ ಹೇಳಲು ರಂಗಯ್ಯನ ಮಗ ರಂಗಸ್ವಾಮಯ್ಯ ಕರೆದುಕೊಂಡು ಬಂದಿದ್ದಾರೆ. ಜಮೀನು ವಿಚಾರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಜಮೀನುಗಳನ್ನು ರಂಗಯ್ಯ ಇವರು ಮಾಡುತ್ತಿದ್ದಾರೆ, ಅವರ ಮನೆಗಳಲ್ಲಿ ಮತ್ತು ಜಮೀನುಗಳಲ್ಲಿ ಭಾಗ ಆಗಿಲ್ಲವೆಂದು ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ.

ದಾವಾ ಸ್ವತ್ತುಗಳ ಪೈಕಿ ಸ.ನಂ. 105, ಸ.ನ. 106 ಇವುಗಳ ಬಗ್ಗೆ ಮಾತ್ರ ಗೊತ್ತು, ಮನೆ, ಸೈಟ್ ಗಳ ಬಗ್ಗೆ ಗೊತ್ತು. ಇನ್ನು ಎರಡು ಸ.ನಂಬರ್ ಗಳ ಬಗ್ಗೆ ಗೊತ್ತಿಲ್ಲ. ಜಮೀನು ಇರುವುದು ಗೊತ್ತು. ರಂಗಯ್ಯ ಮತ್ತು ಅಣ್ಣ ತಮ್ಮಂದಿರು ಬೇರೆ ಬೇರೆಯಾಗಿ ವಾಸವಾಗಿದ್ದಾರೆ. ರಂಗಯ್ಯ ಊರಿನಲ್ಲಿರುತ್ತಾರೆ ಮತ್ತು 3 ಜನ ಸಹೋದರರು ಭದ್ರಾವತಿಯಲ್ಲಿರುತ್ತಾರೆ. ಚಿಕ್ಕಣ್ಣ ಮತ್ತು ಮಾಗಡಯ್ಯ ಎಲ್ಲಿ ವಾಸವಾಗಿದ್ದಾರೆಂದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಅವರನ್ನು ಊರಿಗೆ ಬಂದಾಗ ನೋಡಿರುತ್ತೇನೆ. ಅವರೆಲ್ಲ ಅವರ ಕುಟುಂಬದ ಜೊತೆಗೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ಅವರ ಕುಟುಂಬದಲ್ಲಿ ಏನೇನು ವ್ಯವಹಾರಗಳು ಆಗುತ್ತಿದ್ದವು ಎಂದು ನನಗೆ ಗೊತ್ತಿಲ್ಲ. 1980 ರಿಂದ ಆಚೆಗೆ ರಾಜು ಮತ್ತು ಚಿಕ್ಕಣ್ಣ ಭದ್ರಾವತಿಯಲ್ಲಿ ನೆಲೆಸಿದ್ದರು ಎಂದರೆ ಸರಿ. ಅವರು ಪೇಪರ್ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರವರ ಮಕ್ಕಳ ಮದುವೆ ಮಾಡಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ದಾವೆಯ ವಾಸ್ತವಾಂಶಗಳು ಗೊತ್ತು ಎಂದು ಪ್ರಮಾಣಪತ್ರದಲ್ಲಿ ಬರೆಯಿಸಿದ್ದೇನೆ. ಚಿಕ್ಕಣ್ಣ ಮತ್ತು ಚಿಕ್ಕರಾಜು ಇವರು ಏನು ತಕರಾರು ಹಾಕಿದ್ದಾರೆ ಎಂದು ಗೊತ್ತಿಲ್ಲ. ಅವರು ಬೇರೆ ಬೇರೆ ಕಡೆ ವಾಸವಾಗಿದ್ದರಿಂದ ಒಟ್ಟು ಕುಟುಂಬದ ಸದಸ್ಯರಾಗಿರಲಿಲ್ಲ ಎಂದರೆ ಸರಿ. ಬೇರೆ ಬೇರೆ ಕಡೆ ವಾಸವಾಗಿರುವುದರಿಂದ ಚಿಕ್ಕಣ್ಣ ಮತ್ತು ಚಿಕ್ಕರಾಜು ಇವರು ಸಂಪಾದಿಸಿದ

ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರಲಿಲ್ಲ ಎಂದರೆ ಸರಿಯಲ್ಲ.

ನಿ ಡಿ 2 ಕಲ್ಲೆರೆ ಚಿಕ್ಕಣ್ಣ ಇವರಿಗೆ ಆದ ಮ್ಯುಟೇಷನ್ ಇರುತ್ತದೆ ಎಂದರೆ ಸರಿ. ಅವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಸರಿ. ದಿನಾಂಕ : 23.10.1989 ವೆಂಕಟಪ್ಪನ ಮಗ ಎಸ್ ವಿ ಲಕ್ಕಣ್ಣ ಇವರಿಂದ ಕೊಂಡುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿ ಡಿ 1 ಅವರಿಗೆ ಆದ ಕ್ರಯಪತ್ರ ಎಂದರೆ ಸರಿ. ಕ್ರಯಪತ್ರದ ಪ್ರಕಾರ ಚಿಕ್ಕಣ್ಣ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 5 ಜನ ಒಟ್ಟಿಗೆ ಇದ್ದಾಗ ತೆಗೆದುಕೊಂಡಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಕ್ರಯವಾದಾಗ ನಾನು ಇರಲಿಲ್ಲ. ಹಾಗಾಗಿ ನನಗೆ ಒಟ್ಟಿಗೆ ಇದ್ದಾಗ ತೆಗೆದುಕೊಂಡಿದ್ದು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಸಿ ರಾಜು ಇವರ ಸ.ನಂ. 105 ರಲ್ಲಿ 1 ಎಕರೆ ಕ್ರಯವಾಗಿರುವುದು ನನಗೆ ಗೊತ್ತಿಲ್ಲ. ಸಿ ರಾಜು ಇವರ ಹೆಸರಿನಲ್ಲಿ ಪಹಣಿ ಮತ್ತು ಮ್ಯುಟೇಷನ್ ಆಗಿವೆ ಎಂದರೆ ಸರಿ. ಭದ್ರಾವತಿಯಲ್ಲಿ ಅವರು ಕೆಲಸ ಮಾಡುತ್ತಿದ್ದರಿಂದ ಸಿ ರಾಜು ಇವರು ಸ.ನಂ 105 ನ್ನು ಅವರು ಸಂಪಾದಿಸಿದ ಹಣದಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಚಿಕ್ಕಣ್ಣ ಇವರು ಸಹ ತನ್ನ ಸ್ವಂತ ಸಂಪಾದನೆಯಿಂದ ಸ.ನಂ. 106 ರಲ್ಲಿ 2 ಎಕರೆಯನ್ನು ಕೊಂಡು ಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ಚಿಕ್ಕಣ್ಣ ಇವರು ಓ ಎಸ್ 361/2017 ಎಂಬ ದಾವೆಯನ್ನು ಸಿವಿಲ್ ನ್ಯಾಯಾಲಯ ಮಾಗಡಿ ಇಲ್ಲಿ ಮಾಡಿದ್ದರು ಎಂದರೆ ನನಗೆ ಗೊತ್ತು. ಜಮೀನು ವಿಚಾರದಲ್ಲಿ ಗಲಾಟೆಯಾಗಿದ್ದು ನನಗೆ ಗೊತ್ತು. ಸಿ ರಾಜು ಇವರು ಓ ಎಸ್ 362/2017 ಎಂಬ ದಾವೆ ಮಾಡಿದ್ದು ನನಗೆ ಗೊತ್ತಿಲ್ಲ. ಸ್ವಾಧೀನದ ವಿಚಾರದಲ್ಲಿ ತಂಟೆ ಮಾಡಿದ್ದರಿಂದ ಸಿ ರಾಜು ಕೇಸ್ ಮಾಡಿದ್ದಾರೆ ಎಂದು ನನಗೆ ಗೊತ್ತಿತ್ತು. 3 ಸ.ನಂಬರ್ ಗಳ ಬಗ್ಗೆ ಪ್ರಮಾಣಪತ್ರದಲ್ಲಿ ಬರೆಸಿದ್ದೇನೆ, ಆದರೆ ಈಗ ಹೇಳಲಾಗುವುದಿಲ್ಲ. ಕಲ್ಕೆರೆ ಗ್ರಾಮದಲ್ಲಿ ನನಗೆ ಗೊತ್ತಿರುವವರು ಭಾಗ ಮಾಡಿಕೊಂಡರೆ ಅದರ ಬಗ್ಗೆ ನನಗೆ ಗೊತ್ತು. ನನಗಿಂತ ಹಿಂದೆ ನಡೆದ ಭಾಗದ ವಿಚಾರಗಳು ನನಗೆ ಗೊತ್ತಿಲ್ಲ.

1980 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಬಾಯಿಮಾತಿನ ಭಾಗವಾದ ಬಗ್ಗೆ ನನಗೆ ಗೊತ್ತಿಲ್ಲ. ಭಾಗವಾದ ನಂತರ ಚಿಕ್ಕಣ್ಣ ಮತ್ತು ರಾಜು ಎರಡು ಸ್ವತ್ತುಗಳನ್ನುಕೊಂಡುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾಸದ ಮನೆ ಈಗ ಪಾಳು ಬಿದ್ದಿರುತ್ತದೆ. ಸ.ನಂ. 235/5 ರಲ್ಲಿ ಹಾಗೂ ಸ.ನಂ. 99/2 ರಲ್ಲಿ ಚಿಕ್ಕರಂಗಯ್ಯ ಇವರು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವರು ಭಾಗವಾಗಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಭಾಗವಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ರಂಗಸ್ವಾಮಿ ನನಗೆ ಪರಿಚಯಸ್ಥ ಎಂದರೆ ಸರಿ, ನಾನು ಮತ್ತು ಅವರು ಒಂದೇ ಜಾತಿಯವರು ಎಂದರೆ ಸರಿ. ಅವರು ನನ್ನ ಸ್ನೇಹಿತರು ಎಂದರೆ ಸರಿ. ನಾನು ಅವರಿಗೆ ಸಹಾಯ

ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**